ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಸಂಸತ್ತು

ಪತ್ರಿಕೆಯ ಹೆಸರು : NAME OF THE NEWS PAPER : ಕನ್ನಡ ಪ್ರಭ ದಿನಾಂಕ : DATE : 16/07/2019

# ಕುಡಿದು ಗಾಡಿ ಓಡಿಸಿದ್ರೆ ₹10000 ದಂಡ

## ಡಿಎಲ್ ಇಲ್ಲದಿದ್ರೆ, ಅಪಾಯಕಾರಿ ಚಾಲನೆಗೆ 5000 ರು. ದಂಡ | ಮಸೂದೆ ಮಂಡನೆ, ಮೊಬೈಲ್‌ನಲ್ಲಿ ಮಾತನಾಡುತ್ತಾ ಗಾಡಿ ಚಾಲನೆ ಮಾಡಿದರೆ 5000 ರು. ದಂಡ ಕಟ್ಟಬೇಕು

ನವದೆಹಲಿ: ದೇಶಾದ್ಯಂತ ನಡೆಯುತ್ತಿರುವ ರಸ್ತೆ ಅಪಘಾತಗಳಿಗೆ ಕಡಿವಾಣ ಹಾಕುವ ನಿಟ್ಟಿನಲ್ಲಿ, ಕಠಿಣ ಅಂಶ ಒಳಗೊಂಡ ಮೋಟಾರು ವಾಹನ ಕಾಯ್ದೆ ಮಸೂದೆಯನ್ನು ಕೇಂದ್ರ ಸರ್ಕಾರ ಸೋಮವಾರ ಲೋಕಸಭೆಯಲ್ಲಿ ಮಂಡಿಸಿದೆ. ಕಳೆದ ವರ್ಷ ಲೋಕಸಭೆಯಲ್ಲಿ ಅಂಗೀಕಾರವಾಗಿದ್ದ ಮಸೂದೆ, ವಿಪಕ್ಷಗಳ ವಿರೋಧದ ಕಾರಣ ರಾಜ್ಯಸಭೆಯಲ್ಲಿ ಉಳಿದುಕೊಂಡಿತ್ತು.

ಹೀಗಾಗಿ ಅದಕ್ಕೆ ಕೆಲ ತಿದ್ದುಪಡಿಗಳನ್ನು ಮಾಡಿ ಪರಿಷ್ಕೃತ ಮಸೂದೆಯನ್ನು ಕೇಂದ್ರ ಸರ್ಕಾರ ಇದೀಗ ಮಂಡಿಸಿದೆ. ಪರಿಷ್ಕೃತ ಮಸೂದೆ ಅನ್ವಯ ಅಪಘಾತದಲ್ಲಿ ಸಾವನ್ನಪ್ಪಿದ ಕುಟುಂಬಕ್ಕೆ 5 ಲಕ್ಷ ರು., ತೀವ್ರವಾಗಿ ಗಾಯಗೊಂಡ ವರಿಗೆ 2.5 ಲಕ್ಷ ರು. ಪರಿಹಾರ ನೀಡಲಾಗುವುದು. ಸಂಚಾರ ನಿಯಮ ಉಲ್ಲಂಘನೆಗೆ ಹೆಚ್ಚು ದಂಡ, ರಸ್ತೆ ಅಪಘಾತದಲ್ಲಿ ಸಿಲುಕಿ ಸಾವು-ಬದುಕಿನ ನಡುವೆ ಹೋರಾಡುತ್ತಿರುವವರನ್ನು ಆಸ್ಪತ್ರೆಗೆ ಸೇರಿಸುವವರ ರಕ್ಷಣೆ ಸೇರಿದಂತೆ ಇನ್ನಿತರ ಮಹತ್ವದ ಅಂಶಗಳನ್ನು ಮಸೂದೆ ಒಳಗೊಂಡಿದೆ.

### ಮಸೂದೆ ಯಲ್ಲಿರುವ ಪ್ರಮುಖ ಅಂಶಗಳು

- ವಾಹನಗಳ ಇಂಜಿನ್ ಅಗತ್ಯ ಸ್ಟಾಂಡರ್ಡ್ ಇಲ್ಲದಿದ್ದರೆ, ಉತ್ಪಾದಕರಿಗೆ ₹500 ಕೋಟಿ ದಂಡ
- ನ್ಯಾಯಾಧಿಕರಣದ ಮೊರೆ ಹೋಗಲು 6 ತಿಂಗಳು ಕಾಲಾವಕಾಶ
- ವಾಹನ ನೋಂದಣಿ, ವಾಹನ ಚಾಲನಾ ಪರವಾನಗಿಗೆ ಆಧಾರ್ ಕಡ್ಡಾಯ
- ಕಳಪೆ ಗುಣಮಟ್ಟ ರಸ್ತೆಗಳಿಂದ ಆಗುವ ಅಪಘಾತಗಳಿಗೆ ಪೌರಾಡಳಿತ ಸಂಸ್ಥೆಗಳು, ಗುತ್ತಿಗೆದಾರರನ್ನೇ ಜವಾಬ್ದಾರರನ್ನಾಗಿಸುವುದು
- 2016ರ ಮಸೂದೆಯಲ್ಲಿದ್ದ ರಸ್ತೆ ಅಪಘಾತದಲ್ಲಿ ಸಾವನ್ನಪ್ಪಿದ 3ನೇ ವ್ಯಕ್ತಿಯ ವಿಮೆ ಮೊತ್ತವು 10 ಲಕ್ಷ ರು., ಹಾಗೂ ಅಪಘಾತಕ್ಕೆ 5 ಲಕ್ಷ ಪರಿಹಾರ ನೀಡಬೇಕೆಂಬ ನಿಯಮದಲ್ಲಿ ವಿನಾಯ್ತಿ
- ವಾಹನ ಪರವಾನಗಿ ನವೀಕರಣದ ಅವಧಿಯನ್ನು ಒಂದು ತಿಂಗಳಿನಿಂದ 1 ವರ್ಷದೊಳಗೆ ವಿಸ್ತರಣೆ



| ಯಾವ ತಪ್ಪಿಗೆ ಎಷ್ಟು ದಂಡ? | ಈಗಿನ ದಂಡದ ಮೊತ್ತ | ಪರಿಷ್ಕೃತ ಮೊತ್ತ ರು.ಗಳಲ್ಲಿ |
|---|---|---|
| ಮದ್ಯಪಾನ | 2000 | 10000 |
| ರ್‍ಯಾಷ್ ಡ್ರೈವಿಂಗ್ | 1000 | 5000 |
| ಲೈಸೆನ್ಸ್ ರಹಿತ ಚಾಲನೆ | 500 | 5000 |
| ಮಿತಿಮೀರಿದ ವೇಗ | 400 | 2000 |
| ಸೀಟ್ ಬೆಲ್ಟ್ ಇಲ್ಲದೆ ಚಾಲನೆ | 100 | 1000 |
| ಫೋನಲ್ಲಿ ಮಾತನಾಡುತ್ತ ಚಾಲನೆ | 1000 | 5000 |

- ರಸ್ತೆ ಅಪಘಾತದಲ್ಲಿ ಸಿಲುಕಿದವರನ್ನು ಆಸ್ಪತ್ರೆಗೆ ಸೇರಿಸುವವರ ರಕ್ಷಣೆಗೆ ನೂತನ ಮಸೂದೆಯಲ್ಲಿ ಅವಕಾಶ. ಗಾಯಾಳುಗಳನ್ನು ಆಸ್ಪತ್ರೆಗೆ ಸೇರಿಸುವವರು ತಮ್ಮ ಗುರುತನ್ನು ಇಚ್ಛಿಸಿದಲ್ಲಿ ಮಾತ್ರ ಬಹಿರಂಗಪಡಿಸಬಹುದಾದ ಆಯ್ಕೆ: ರಸ್ತೆ ಅಪಘಾತದ ಸಂತ್ರಸ್ತರ ನೆರವಿಗೆ ಬರುವವರ ಗೋಪ್ಯತೆ ಕಾಪಾಡುವುದು